ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು.		ಚಾಲ್ತಿ.	
ಅಕ್ಕಿ	ರೂಪಾಯಿ 1ಕ್ಕೆ	...	$7\frac{3}{4}$	6 ರಿಂದ $6\frac{1}{2}$ ವರಿಗೆ	ಸೇರುಗಳು.
ರಾಗಿ	,,	...	$20\frac{3}{4}$	$12\frac{1}{2}$ ರಿಂದ $13\frac{1}{2}$ ವರಿಗೆ	ಸೇರುಗಳು.

ವ್ಯವಸಾಯ ಕೆಲಸ—ರಾಗಿ ಹೊಲಗಳಲ್ಲಿ ಕಳ್ಳೆ ಕೀಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲು ಸಿಕ್ಕುತ್ತವೆ.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳ ಅಭಿವೃದ್ಧಿ :—ಹೊಸಕೋಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಳೇ ಕೀಳುತ್ತಿದ್ದಾರೆ. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರು — ದೇವನಹಳ್ಳಿಯಲ್ಲಿ ಆಲೂಗೆಡ್ಡೆಯನ್ನು ಅಗದು ತೆಗಿಯುತ್ತಿದ್ದಾರೆ.

10. ಕಾಲದ ಆಯತಿಯು ಸಾಧಾರಣವಾಗಿದೆ. ಆಹಾರ ಜಿನಸು ಸಾಕಾದಷ್ಟು ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ, ಕ್ಯಾರ್ಹಳ್ಳಿ, ಆನೇಕಲ್, ದೇವನಹಳ್ಳಿ, ಚನ್ನಪಟ್ಟಣ, ಈ ಕಸಬಾಗಳಲ್ಲಿಯೂ ಮತ್ತು ಹೊಸಕೋಟೆ, ನೆಲಮಂಗಲ, ಈ ತಾಲ್ಲೂಕುಳ ಕೆಲವು ಹೋಬಳಿಗಳಲ್ಲಿಯೂ ಪ್ಲೇಗ್ ಇರುತ್ತಲಿರುವ ಹಾಗೆ ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಡಿಸ್ಟ್ರಿಕ್ಟಿನ ಎಲ್ಲಾ ಭಾಗಗಳಲ್ಲಿಯೂ ಹುರುಳಿಯನ್ನು ಬಿತ್ತುವುದಕ್ಕೆ ಭೂಮಿಯನ್ನು ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಈಚಿಗೆ ಮಳೆಯಿಂದ ಬಣಗಿದ ಪೈರೆಲ್ಲವು ತಲೆ ಎತ್ತುತ್ತಾ ಇದೆ.

ಬಿತ್ತನೆಯಾದ ಪೈರುಗಳು—ಚಿಕ್ಕಬಳ್ಳಾಪುರ ಮತ್ತು ಗೋರೀಬಿದನೂರುಗಳಲ್ಲಿ ವಿನಹ ಡಿಸ್ಟ್ರಿಕ್ಟಿನೆಲ್ಲೆಲ್ಲಾ ಹುರುಳಿ; ಬೌರಿಂಗ್‌ಪೇಟೆ, ಮುಳಬಾಗಲು, ಮತ್ತು ಮಾಲೂರುಗಳಲ್ಲಿ ಹುಚ್ಚೆಳ್ಳು.

ಕುಯ್ಯಲಾದ ಪೈರುಗಳು—ಕೋಲಾರದಲ್ಲಿ ಸಾವೆ, ಶಿಡ್ಲಘಟ್ಟದಲ್ಲಿ ಉರುಳುಗೆಡ್ಡೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಿಸು ಸಿಕ್ಕುತ್ತವೆ.

11. ಕೋಲಾರದ ಚಿನ್ನದ ಗಣಿಗಳಲ್ಲಿಯೂ, ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಪ್ಲೇಗ್ ಉಪದ್ರವೂ, ಮತ್ತು ಸೀತಾಳೆಸಿಡುಬು, ಸಿಡುಬು ಚಿಂತಾಮಣಿ ಟರ್ವನಲ್ಲಿ ಹೊರ್ತು ಜನಾರೋಗ್ಯವು ಚೆನ್ನಾಗಿದೆ.

12. ಸಪ್ಪೆ ರೋಗವು ಇರತಕ್ಕ ಚಿಂತಾಮಣಿಯ ಕಸಬಾ ಹೋಬಳಿಯ ಕೊಂಚ ಭಾಗವು ಹೊರ್ತು ಮಿಕ್ಕ ಎಲ್ಲಾ ಭಾಗದಲ್ಲಿಯೂ ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕು.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುತ್ತಲೂ ಮತ್ತು ಬಿತ್ತುತ್ತಲೂ ಇರುತ್ತಾರೆ.

ಬಿತ್ತನೆಯಾದ ಪೈರುಗಳು—ಗುಬ್ಬಿಯಲ್ಲಿ ರಾಗಿ; ಗುಬ್ಬಿ ಮತ್ತು ತಿಪಟೂರುಗಳಲ್ಲಿ ಸಾವೆ, ನವಣೆ ಮತ್ತು ಜೋಳ; ಗುಬ್ಬಿ, ತುರುವೇಕೆರೆಯಲ್ಲಿ ಹುಚ್ಚೆಳ್ಳು; ಸಿರಾದಲ್ಲಿ ಕಡಲೆ. ಎಲ್ಲಾ ತಾಲ್ಲೂಕುಗಳಲ್ಲಿಯೂ ಹುರುಳಿ

ಕುಯ್ಯಲಾದ ಪೈರುಗಳು—ಗುಬ್ಬಿ, ತಿಪಟೂರಿನಲ್ಲಿ ಭತ್ತ; ಪಾವಗಡದಲ್ಲಿ ರಾಗಿ; ಗುಬ್ಬಿಯಲ್ಲಿ ಕಬ್ಬು; ಚಿಕ್ಕನಾಯಕನಹಳ್ಳಿಯಲ್ಲಿ ಉದ್ದು ಮತ್ತು ಹೆಸರು; ತಿಪಟೂರಿನಲ್ಲಿ ಎಳ್ಳು; ಕೊರಟಗೆರೆಯಲ್ಲಿ ಜೋಳ.

10. ಕಾಲದ ಆಯತಿಯು ಚೆನ್ನಾಗಿದೆ.

11. ತುಮಕೂರು ಟರ್ವನಲ್ಲಿ ಕೊಂಚ ಪ್ಲೇಗ್ ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಹುಲ್ಲೂ, ನೀರೂ ಸಾಕು. ಸಿರಾ ತಾಲ್ಲೂಕಿನಲ್ಲಿ ನೀರಿನ ಕ್ಷಾಮವು ಕಂಡಿದ್ದದ್ದು ಹೋದವಾರದ ಮಳೆಯಿಂದ ನಿವಾರಣೆಯಾಗಿದೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಮುಂಜ್ಯ ಮತ್ತು ಮಳವಳ್ಳಿ ತಾಲ್ಲೂಕುಗಳ ಭಾಗಗಳಲ್ಲಿ ಭತ್ತವನ್ನು ಕೀತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಗುಂಡ್ಲು ಪೇಟೆ, ಮಳವಳ್ಳಿ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ಹುರುಳಿ; ಗುಂಡ್ಲು ಪೇಟೆ ತಾಲ್ಲೂಕಿನ ಕೊಂಚ ಭಾಗಗಳಲ್ಲಿ ಉದ್ದೂ ಮತ್ತು ಹೆಸರು.

ಬಿತ್ತನೆಯಾದ ಪೈರುಗಳು—ಹೆಗ್ಗಡದೇವನಕೋಟೆ ತಾಲ್ಲೂಕಿನ ಕೊಂಚ ಭಾಗಗಳಲ್ಲಿ ರಾಗಿ ಮತ್ತು ಎಳ್ಳು.

10. ಕಾಲದ ಆಯತಿಯು ಚೆನ್ನಾಗಿದೆ. ರೈತರು ಮತ್ತು ವರ್ತಕರು ಸಾಕಾದಷ್ಟು ಆಹಾರ ಜಿನಸಿಗಳನ್ನು ಒಂಟಾಗಿದಾರೆಂದು ರಿಪೋರ್ಟಾಗಿದೆ.

11. ಮೈಸೂರು, ಹುಣಸೂರು ಮತ್ತು ಗುಂಡ್ಲು ಪೇಟೆ ತಾಲ್ಲೂಕುಗಳ ಕೊಂಚ ಭಾಗಗಳಲ್ಲಿ ಪ್ಲೇಗ್ ರೋಗವೂ, ಮೈಸೂರು ಕಸಬಾ ಹೋಬಳಿಯಲ್ಲಿ ಕಾಲರಾ ಉಪದ್ರವದ ಹೊರತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಮೈಸೂರು ತಾಲ್ಲೂಕು ಅಯ್ಯಾರುಹಳ್ಳಿ ಮತ್ತು ಕುಡನಹಳ್ಳಿಗಳಲ್ಲಿ ಕಾಲು ರೋಗ ಮತ್ತು ಬಾಯಿ ರೋಗಗಳ ಹೊರತು ದನಗಳು ಆರೋಗ್ಯವಾಗಿರುವ ಹಾಗೆ ರಿಪೋರ್ಟಾಗಿದೆ. ನೀರೂ ಹುಲ್ಲೂ ಸಾಕು.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹುರುಳಿ ಮತ್ತು ಕಡಲೆ ಇವುಗಳನ್ನು ಬಿತ್ತುವದಕ್ಕಾಗಿ ಹೊಲಗಳನ್ನು ರೈತರುಗಳು ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಮಂಜರಾಬಾದ್ ತಾಲ್ಲೂಕಿನಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಭತ್ತ ಮತ್ತು ರಾಗಿ; ಚನ್ನರಾಯಪಟ್ಟಣ, ಅರಕೇರೆ, ಅರಕಲ್‌ಗೂಡು, ಈ ತಾಲ್ಲೂಕುಗಳಲ್ಲಿ ಭತ್ತ, ರಾಗಿ ಮತ್ತು ಅವರೆ; ಬೇಲೂರು ಮತ್ತು ಅರಕೇರೆ ತಾಲ್ಲೂಕುಗಳಲ್ಲಿ ಭತ್ತ, ಜೋಳ, ಹುಚ್ಚೆಳ್ಳು ಮತ್ತು ಕಬ್ಬು; ಹೊಳೇನರಸೀ ಪುರದ ತಾಲ್ಲೂಕಿನಲ್ಲಿ ಭತ್ತ, ಕಬ್ಬು, ದೊಡ್ಡರಾಗಿ, ತೊಗರಿ, ಹರಳು, ಅವರೆ, ಮೆಣಸಿನಕಾಯಿ ಮತ್ತು ಹುರುಳಿ; ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಮಂಜರಾಬಾದ್ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ರಾಗಿ; ಅವೆರಕಲ್‌ಗೂಡು ತಾಲ್ಲೂಕಿನಲ್ಲಿ ರಾಗಿ, ತಡಗಣಿ, ಸಾಸಿವೆ ಮತ್ತು ಹುಚ್ಚೆಳ್ಳು; ಇವುಗಳೆಲ್ಲಾ ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಟಣ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳೇಜ್ವರ ಮತ್ತು ಜ್ವರ, ಇವುಗಳ ಇರುವುದು ಹೊರತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಭತ್ತ, ರಾಗಿ, ಜೋಳ ಮತ್ತು ಕಬ್ಬು, ಇವುಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿವೆ.

ಬಿತ್ತನೆಯಾದ ಪೈರುಗಳು—ಸೊರಬ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ, ಹರಳು, ಹುಚ್ಚೆಳ್ಳು, ಇವುಗಳನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಶಿವಮೊಗ್ಗ ಮತ್ತು ಹೊನ್ನಾಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಹುಚ್ಚೆಳ್ಳು ಕುಯ್ಯಲಾಗುತ್ತಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರದ ಜಿನಸುಗಳು ಸಾಕಾದಷ್ಟು ದೊರೆಯುತ್ತವೆ.

11. ಜನಾರೋಗ್ಯ ಸಾಧಾರಣವಾಗಿ ಚೆನ್ನಾಗಿದೆ. ಚನ್ನಗಿರಿ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು; ಶಿವಮೊಗ್ಗೆ ಟವ್ನನಲ್ಲಿಯೂ, ಶಿವಮೊಗ್ಗ ಮತ್ತು ಹೊನ್ನಾಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಕುಂಸಿ ಸಬ್ ತಾಲ್ಲೂಕಿನಲ್ಲಿಯೂ, ಪ್ಲೇಗ್ ಉಪದ್ರವು ಇನ್ನೂ ಇವೆ.

12. ಶಿವಮೊಗ್ಗ, ಸೊರಬ, ನಗರೆ ತಾಲ್ಲೂಕುಗಳ ಭಾಗಗಳಲ್ಲಿಯೂ ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಗೋಮಾರೀ ರೋಗವು ಇದ್ದೇ ಇದೆ. ಹುಲ್ಲೂ ನೀರೂ, ಸಾಕು.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕೊಪ್ಪ ಮತ್ತು ಎಡೇಹಳ್ಳಿಯಲ್ಲಿ ಭತ್ತದ ನಾಟಿ ಕೆಲಸವು ನಡೆಯುತ್ತಿದೆ.

ನಿಂತಿರುವ ಪೈರುಗಳು—ಚಿಕ್ಕಮಗಳೂರು, ಕಡೂರು, ತರೀಕೆರೆ, ಕೊಪ್ಪ, ಮೂಡಿಗೆರೆ, ಮತ್ತು ಎಡೇಹಳ್ಳಿ ತಾಲ್ಲೂಕುಗಳಲ್ಲಿ ಭತ್ತವು. ಚಿಕ್ಕಮಗಳೂರಲ್ಲಿ ಅವರೆಯೂ ಚಿಕ್ಕಮಗಳೂರು ಮತ್ತು ತರೀಕೆರೆಯಲ್ಲಿ ತೊಗರಿಯೂ ಚಿಕ್ಕಮಗಳೂರು, ಮೂಡಿಗೆರೆ, ಮತ್ತು ಎಡೇಹಳ್ಳಿಯಲ್ಲಿ ಕಾಫಿಯೂ, ಚಿಕ್ಕಮಗಳೂರು, ಕೊಪ್ಪ ಮತ್ತು ಎಡೇಹಳ್ಳಿಯಲ್ಲಿ ಕಬ್ಬು, ಕಡೂರಿನಲ್ಲಿ ನವಣೆ, ಸಾವೆ ಮತ್ತು ಗೋಧಿಯೂ, ತರೀಕೆರೆಯಲ್ಲಿ ಜೋಳ, ಹರಳು ಮತ್ತು ಖುರಾಸಾನಿಯು ಕೊಪ್ಪ ಮತ್ತು ಮೂಡಿಗೆರೆಯಲ್ಲಿ ಯಾಲಕ್ಕಿಯೂ, ಈ ಪೈರುಗಳು ಒಳ್ಳೆ ಸ್ಥಿತಿಯಲ್ಲಿವೆ. ಆದರೆ ಕೈಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಅಡಿಕೇ ಪೈರಿಗೆ ಇನ್ನೂ "ಕೊಳೇ ರೋಗ" ಹತ್ತಿದೆ.

ಬಿತ್ತಿದ ಪೈರುಗಳು—ಕಡೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ ತರೀಕೆರೆ ತಾಲ್ಲೂಕಿನಲ್ಲಿ ಕೊತ್ತುಂಬರೀ ಬೀಜ ಮತ್ತು ಹುರುಳಿ.

ಕಟಾವಾದ ಪೈರು ಮತ್ತು ಅದರ ಉತ್ಪತ್ತಿ—ಚಿಕ್ಕಮಗಳೂರಿನಲ್ಲಿ ಗಿಡ್ಡ ರಾಗಿ 8 ಆಣೆ ಪೈರು, ಕಡೂರಲ್ಲಿ ಜೋಳ 8 ಆಣೆ ಪೈರು, ಕಬ್ಬು 8 ಆಣೆ ಪೈರು, ಹುಚ್ಚೆಳ್ಳು 6 ಆಣೆ ಪೈರು, ಕೊತ್ತುಂಬರೀ ಬೀಜ 8 ಆಣೆ ಪೈರು, ಹೆಸರು 4 ಆಣೆ ಪೈರು, ಉದ್ದು 4 ಆಣೆ ಪೈರು, ತರೀಕೆರೆಯಲ್ಲಿ ಹುಚ್ಚೆಳ್ಳು 16 ಆಣೆ ಪೈರು, ಕೊಪ್ಪದಲ್ಲಿ ಯಾಲಕ್ಕಿ 6 ಆಣೆ ಪೈರು, ಮೂಡಿಗೆರೆಯಲ್ಲಿ 2 ಆಣೆ ಪೈರು.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಸಾಮಗ್ರಿಗಳು ಸಾಕಾಗುವಷ್ಟು ಇವೆ.

11. ಚಿಕ್ಕಮಗಳೂರಲ್ಲಿಯೂ ಮತ್ತು ಚಿಕ್ಕಮಗಳೂರು, ಕಡೂರು ಈ ತಾಲ್ಲೂಕುಗಳಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಸ್ಪೋಟು ರೋಗವು ಇರುವದರ ಶಿವಾಯಿ ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಜಾನುವಾರುಗಳು ಆರೋಗ್ಯವಾಗಿವೆ. ಚಿಕ್ಕಮಗಳೂರು, ತರೀಕೆರೆ, ತಾಲ್ಲೂಕುಗಳಲ್ಲಿ ಮತ್ತು ಎಡೇಹಳ್ಳಿ ಸಬ್ ತಾಲ್ಲೂಕಿನಲ್ಲಿಯೂ "ದೊಡ್ಡರೋಗವು" ಕಮ್ಮಿಯಾಗುತ್ತಲಿದೆ. ಆದರೆ, ಕೊಪ್ಪದ ತಾಲ್ಲೂಕು ಅಬ್ಬಿಮಳ್ಳಿ ಗ್ರಾಮದಲ್ಲಿ "ಲಾಳಿ ಸಂಕೋಲೆ ರೋಗವು" ಪ್ರಾರಂಭವಾಗಿ ಇದೆ. ಈ ರೋಗವನ್ನು ನಿಲ್ಲಿಸುವ ಏರ್ಪಾಡು ನಡೆಯುತ್ತಾ ಇದೆ. ಮತ್ತು ರೋಗ ತಗಲಿದ ಜಾನುವಾರುಗಳಿಗೆ ಕ್ಯಾಟಲ್ ಡಿಸೀಜ್ ಇನ್‌ಸ್ಪೆಕ್ಟರವರ ಸಲಹೆ ಮೇರಿಗೆ ಚಿಕಿತ್ಸೆಯನ್ನು ಮಾಡುತ್ತಾ ಇದ್ದಾರೆ. ನೀರೂ ಮತ್ತು ಮೇವೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಬಳ್ಳಿ ಸ್ಥಿತಿಯಲ್ಲಿವೆ

ಬಿತ್ತನೆಯಾದ ಪೈರುಗಳು—ಚಿತ್ರದುರ್ಗದ ತಾಲ್ಲೂಕಿನಲ್ಲಿ ಬಿಳೀ ಜೋಳವು ಮತ್ತು ಕಡಲೆ, ಮತ್ತು ಚಿತ್ರದುರ್ಗ, ಜಕ್ಕಳಕೆರೆ, ದಾವಣಗೆರೆ, ಮೊಳಕಾಲ್ಮೂರು, ಹೊಸದುರ್ಗ, ಈ ತಾಲ್ಲೂಕುಗಳಲ್ಲಿ ಹುರುಳಿ.

ಕುಯ್ಯಲಾದ ಪೈರುಗಳು ಮತ್ತು ಉತ್ಪತ್ತಿ—ಚಿತ್ರದುರ್ಗ ತಾಲ್ಲೂಕಿನಲ್ಲಿ ಕಬ್ಬು, ಗೋಧಿ, ಉದ್ದು ಮತ್ತು ಜೋಳ ಉತ್ಪತ್ತಿ 4ರಿಂದ 8 ಆಣೆ ವರಿಗೆ; ಚಿತ್ರದುರ್ಗ, ಹೊಸದುರ್ಗ, ಹರಿಹರದ ಸಬ್ ತಾಲ್ಲೂಕು, ಇವುಗಳಲ್ಲಿ ಹುಚ್ಚೆಳ್ಳು, ಉತ್ಪತ್ತಿ—4 ರಿಂದ 10 ಆಣೆ ವರಿಗೆ; ಹರಿಹರದ ಸಬ್ ತಾಲ್ಲೂಕಿನಲ್ಲಿ ರಾಗಿ, ಉತ್ಪತ್ತಿ—8 ರಿಂದ 10 ಆಣೆ ವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ಧನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಅಕ್ಟೋಬರ್ 22ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.